ಆ) ಇಲ್ಲ.

ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆ ನಿರ್ವಹಿಸುತ್ತಿರುವ ನೌಕರರು

388-ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಬಾಗೇವಾಡಿ): ಮಾನ್ಯ ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆ ನಿರ್ವಹಿಸುತ್ತಿರುವ ನೌಕರರನ್ನು ಸರ್ಕಾರಿ ಸೇವೆ ರೀತ್ಯಾ ಸಕ್ರಮಗೊಳಿಸುವುದು ಸರ್ಕಾರದ ನೀತಿಯಲ್ಲವೆ?*

ಆ) *ಹಾಗಿದ್ದಲ್ಲಿ, ವೃತ್ತಿ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು ರೂಪಿಸಲು ಮತ್ತು ಮಂಜೂರಾತಿ ನೀಡಲು ಎಷ್ಟು ಸಮಯಬೇಕಾಗುವುದು?*

ಇ) *ಹಾಗಿದ್ದಲ್ಲಿ 82 ಮಂದಿ ಪೂರ್ಣಕಾಲಿಕ ವೇತನ ಶ್ರೇಣಿಯ ಮತ್ತು 108 ಸಂಚಿತ ವೇತನ ಶ್ರೇಣಿಯಲ್ಲಿ ಸಕ್ರಮ ಗೊಳಿಸಲು ಸರ್ಕಾರಕ್ಕೆ ಭರಿಸುವ ಆರ್ಥಿಕ ಹೊರೆ ಎಷ್ಟು?*

ಶ್ರೀ ಪ್ರಭಾಕರ ಎಸ್. ರಾಣೆ (ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ಪ್ರಸ್ತಾವನೆ ಬಂದಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ತಕ್ಷಣವೇ ವೃಂದ ಮತ್ತು ನೇಮಕಾತಿ ಪರಿಶೀಲನಾ ಸಮಿತಿ ಸಭೆ ಕರೆದು ಚರ್ಚಿಸಲಾಗುವುದು ಹಾಗೂ ಇತರೆ ಇಲಾಖೆ ಅಂದರೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖಾ (ಸೇವಾ ನಿಯಮಗಳು) ಹಣಕಾಸು ಇಲಾಖೆ; ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಲು ಸಮಯಬೇಕಾಗುವುದರಿಂದ ಆದ್ಯತೆ ಮೇರೆಗೆ ಕ್ರಮ ಜರುಗಿಸಲಾಗುವುದು.

	ಸಕ್ರಮಗೊಳಿಸಿದ್ದಲ್ಲಿ ಸರ್ಕಾರಕ್ಕೆ ತಗಲುವ ಹೊರೆ (ಲಕ್ಷ - ರೂ.ಗಳಲ್ಲಿ)
1) ಪೂರ್ಣಕಾಲಿಕ ವೇತನದಲ್ಲಿರುವ ನೌಕರರು-73	34.04
2) ಸಂಚಿತ ವೇತನ ರೂಪದಲ್ಲಿರುವ ನೌಕರರು-68	30.15
ಒಟ್ಟು	64.19

ಬೆಳಗಾಂ ತಾಲ್ಲೂಕಿನ ತಾರಿಹಾಳ ಮತ್ತು ಕಟ್ಟಿ ಗ್ರಾಮಗಳಿಗೆ ಜರೂರಾಗಿ ಪ್ರಾಥಮಿಕ ಪಶು ಚಿಕಿತ್ಸಾಲಯ

376-ಶ್ರೀ ಮೊಡಗೇಕರ್ ದೇಸಾಯಿ (ಬಾಗೇವಾಡಿ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ತಾಲ್ಲೂಕಿನ ತಾರಿಹಾಳ ಮತ್ತು ಕಟ್ಟಿ ಗ್ರಾಮಗಳಿಗೆ ಜರೂರಾಗಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಆಗತ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಸದರಿ ಗ್ರಾಮಗಳಿಗೆ ಪ್ರಾಥಮಿಕ : ಪಶುಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಕ್ರಮ ತೆಗೆದುಕೊಳ್ಳಲಾಗಿದೆಯೇ?*

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಹೌದು.

ಅ) ಬೆಳಗಾಂ ಜಿಲ್ಲಾ ಪಂಚಾಯತ್ನಿಂದ ಪ್ರಸ್ತಾವನೆಯನ್ನು ಕೋರಲಾಗಿದೆ.

ಕನಕಪುರ ತಾಲ್ಲೂಕಿನಲ್ಲಿ ಹೊಸದಾಗಿ ಕಾಲೇಜನ್ನು ಪ್ರಾರಂಭಿಸುವುದು

368-ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು); ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕನಕಪುರ ತಾಲ್ಲೂಕು ಮತ್ತು ಚೆನ್ನಪಟ್ಟಣ ತಾಲ್ಲೂಕು (ವಿರೂಪಾಕ್ಷಿಪುರ ಹೋಬಳಿ ಮಾತ್ರ) ವ್ಯಾಪ್ತಿಯಲ್ಲಿ ಹೊಸದಾಗಿ ಕಾಲೇಜುಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಪ್ರಯತ್ನದಲ್ಲಿದೆಯೇ?*

ಆ) *ಇದ್ದಲ್ಲಿ ಅವುಗಳನ್ನು ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು?*

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಬೆಳಗಾಂ ತಾಲ್ಲೂಕಿನಲ್ಲಿ ಮುಚ್ಚಂಡಿ ಮತ್ತು ತಾರಿಗಾಲ ಗ್ರಾಮಗಳಲ್ಲಿ ಪ್ರಾಥಮಿಕ ಪಶುಚಿಕಿತ್ಸಾಲಯ ಕೇಂದ್ರ.

194-ಶ್ರೀ ಮೊಡಗೇಕರ್ ದೇಸಾಯಿ (ಹಿರೇಬಾಗೇವಾಡಿ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ತಾಲ್ಲೂಕಿನ ಮುಚ್ಚಂಡಿ ಮತ್ತು ತಾರಿಗಾಳ ಗ್ರಾಮಗಳಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ತೆರೆಯುವ ಪ್ರಸ್ತಾವನೆಯು ಸರ್ಕಾರದಲ್ಲಿ ಬಾಕಿ ಇದೆಯೇ?*

ಆ) *ಹಾಗಿದ್ದಲ್ಲಿ, ಸದರಿ ಗ್ರಾಮಗಗಳಿಗೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ತೆರೆಯದೇ ಇರಲು ಕಾರಣಗಳೇನು?*

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಹೌದು

ಆ) 1993-94ನೇ ಸಾಲಿನಲ್ಲಿ ಬೆಳಗಾಂ ಜಿಲ್ಲಾ ಯೋಜನೆಯಲ್ಲಿ ಹಣದ ಅಭಾವದಿಂದಾಗಿ ಪ್ರಾರಂಭ ಮಾಡಲು ಸಾಧ್ಯವಾಗಿರುವುದಿಲ್ಲ.

ಕನಕಪುರ ತಾಲ್ಲೂಕಿನಲ್ಲಿರುವ ಪ್ರೌಢ ಶಾಲೆಗಳು

195-ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕನಕಪುರ ತಾಲ್ಲೂಕಿನಲ್ಲಿ ಇರುವ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ಮತ್ತು ಯಾವ ಯಾವ ಗ್ರಾಮಗಳಲ್ಲಿವೆ.*

ಆ) *ಕನಕಪುರ ತಾಲ್ಲೂಕು ಮತ್ತು ಚೆನ್ನಪಟ್ಟಣ ತಾಲ್ಲೂಕುಗಳಲ್ಲಿ 1992ರಿಂದ ಈಚೆಗೆ ಎಷ್ಟು ಪ್ರೌಢ ಶಾಲೆಗಳನ್ನು ಹೊಸದಾಗಿ ಪ್ರಾರಂಭಿಸಲಾಗಿದೆ: ಹಾಗೂ ಎಲ್ಲಿ?*

ಇ) *ಇನ್ನೂ ಎಷ್ಟು ಪ್ರೌಢಶಾಲೆಗಳನ್ನು ಈ ತಾಲ್ಲೂಕಿನಲ್ಲಿ ಪ್ರಾರಂಭಿಸಲು ಸರ್ಕಾರದ ಯೋಜನೆಯಲ್ಲಿದೆ?*

ಈ) *ಸಾತನೂರು ಕ್ಷೇತ್ರದ ಯಾವ ಯಾವ ಶಾಲೆಗಳಲ್ಲಿ ಎಷ್ಟು ಶಿಕ್ಷಕರಿದ್ದಾರೆ?*

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):